(ಸದನವು ಪುನ: 1.08ನಿಮಿಷಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು, ಅಧ್ಯಕ್ಷರು ಪೀಠದಲ್ಲಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಧರಣಿ ಮುಂದುವರೆಸಿದ್ದರು)

6. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ.

ಉಪಾಧ್ಯಕ್ಷರು: ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ಜನವರಿ 25ನೇ ತಾರೀಖಿನಂದು ನಮ್ಮ ಈ ಸದನಕ್ಕೆ ಬಂದು ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುವುದು ಈ ಸದನದ ಜವಾಬ್ದಾರಿ ಮತ್ತು ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ರಾಜ್ಯಪಾಲರು ಮಾಡಿರುವಂತಹ ಭಾಷಣಕ್ಕೆ ನಾವೆಲ್ಲರೂ ವಂದನೆಗಳನ್ನು ಸಲ್ಲಿಸುತ್ತಾ, ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಹೇಳುತ್ತಾ, ಈ ಒಂದು ಸತ್‌ಸಂಪ್ರದಾಯ ಏನಿದೆ, ನಿಮಗೆ ಈ ಸದನದ ಬಗ್ಗೆಯೂ ಗೌರವ ಇಲ್ಲ, ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆಯೂ ಗೌರವ ಇಲ್ಲ. ಸದನದ ಸಮಯವನ್ನು ಏಕೆ ಹಾಳು ಮಾಡುತ್ತಿದ್ದೀರಿ?

(ಸದನದ ಬಾವಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಇಂಥ ಸಂಧರ್ಭದಲ್ಲಿ ನಮ್ಮ ಸರ್ಕಾರ ಮಾಡಿರುವ ಸಾಧನೆಗಳ ಬಗ್ಗೆಯೂ ಕೂಡ ಕಾಂಗ್ರೆಸ್‌ನವರಿಗೆ ಹೆಮ್ಮೆ ಇಲ್ಲ. ಮಾನ್ಯ ರಾಜ್ಯಪಾಲರು ಅತ್ಯುತ್ತಮವಾದ ಒಂದು ಭಾಷಣವನ್ನು ಈ ಸದನದಲ್ಲಿ ಮಾಡಿದ್ದಾರೆ. ಸರ್ಕಾರದ ನೀತಿ ನಿಯಮಗಳನ್ನು, ಧೋರಣೆಗಳನ್ನು ಕರ್ನಾಟಕದ ಜನತೆಯ ಮುಂದೆ ತಮ್ಮ ಮೂಲಕ ಇಟ್ಟಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಕಾಂಗ್ರೆಸ್‌ನವರು ಸದನವನ್ನು ನಡೆಸುವುದಕ್ಕೂ ಬಿಡುವುದಿಲ್ಲ. ರಾಜ್ಯಪಾಲರ ಭಾಷಣಕ್ಕೂ ಇವರಿಗೆ ಗೌರವವಿಲ್ಲ, ಸ್ಪೀಕರ್ ಬಗ್ಗೆ ಇವರಿಗೆ ಗೌರವವಿಲ್ಲ. ಕಾಂಗ್ರೆಸ್‌ನವರಿಗೆ ಇರುವಂಥ ಇತಿಹಾಸವನ್ನು ನೋಡಿದರೆ ಈ ರೀತಿ ಇವರು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ

ಸದನದ ಗೌರವವನ್ನು ಹಾಳು ಮಾಡುತ್ತಿದ್ದಾರೆ. ಇವರಿಗೆ ಯಾರ ಬಗ್ಗೆ ಗೌರವವಿದೆ ಹೇಳಿ? ಸ್ಪೀಕರ್ ಸ್ಥಾನದ ಬಗ್ಗೆ ಗೌರವವಿಲ್ಲ, ಮಾನ್ಯ ರಾಜ್ಯಪಾಲರ ಬಗ್ಗೆ ಗೌರವವಿಲ್ಲ. ಸದನದ ಬಗ್ಗೆ ಗೌರವವಿಲ್ಲ. ನೀವು ಇಂಥ ಸಂಧರ್ಭದಲ್ಲಿ ಸದನವನ್ನು ನಡೆಸುವುದಕ್ಕೆ ಬಿಡದೇ ಇರುವುದನ್ನು ನೋಡಿದರೆ, ನಿಜವಾಗಿಯೂ ನೀವು ಪ್ರಜಾಪ್ರಭುತ್ವ ವ್ಯವಸ್ಥೆಯ ವಿರೋಧಿಗಳು ಎನ್ನುವುದನ್ನು ಇಲ್ಲಿ ಎತ್ತಿ ತೋರಿಸುತ್ತಿದ್ದೀರಿ. ನಮ್ಮ ಸಮ್ಮಿಶ್ರ ಸರ್ಕಾರದ ಒಂದು ವರ್ಷದ ಸಾಧನೆಯನ್ನು ನೋಡಿ ಸಹಿಸುವುದಕ್ಕಾಗದೇ, ತಡೆದುಕೊಳ್ಳುವುದಕ್ಕಾಗದೇ ಈ ರೀತಿ ಕಾಂಗ್ರೆಸ್‌ನವರು ಮಾಡುತ್ತಿದ್ದಾರೆಂದು ನಾವು ಹೇಳಬೇಕಾಗಿದೆ. ನಿಜವಾಗಿ ನಮ್ಮ ಸಮ್ಮಿಶ್ರ ಸರ್ಕಾರ ಒಂದು ವರ್ಷದ ಅವಧಿಯಲ್ಲಿ ಮಾಡಿರುವ ಸಾಧನೆಯನ್ನು ಸುವರ್ಣಾಕ್ಷರದಲ್ಲಿ ಬರೆದಿಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಈ ನಮ್ಮ ಸಾಧನೆಯನ್ನು ನೋಡಿ ಸಹಿಸಿಕೊಳ್ಳುವುದಕ್ಕಾಗದೇ ಇರುವಂಥ ನೀವು ಈ ರೀತಿಯಲ್ಲಿ ಸದನದ ಕಲಾಪಗಳಿಗೆ ಅಡ್ಡಿ ಪಡಿಸುತ್ತಿರುವುದನ್ನು ನೋಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಆರಗ ಜ್ಞಾನೇಂದ್ರರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಅಭಿವೃದ್ಧಿಯ ವಿಚಾರದಲ್ಲಿ ನಮ್ಮ ಸಮ್ಮಿಶ್ರ ಸರ್ಕಾರ ಕಳೆದ ಒಂದು ವರ್ಷದಲ್ಲಿ ಒಂದು ಹೊಸ ಶಕೆಯನ್ನು ಪ್ರಾರಂಭ ಮಾಡಿದೆ. ಅಭಿವೃದ್ಧಿಯ ವಿಚಾರದಲ್ಲಿ ಇಡೀ ದೇಶದಲ್ಲಿಯೇ ಉತ್ತಮವಾದಂಥ ಆಡಳಿತವನ್ನು ಹೊಂದಿರುವಂಥ ರಾಜ್ಯವೆಂದು ನಾವು ಪರಿಗಣಿಸುವುದಕ್ಕೆ ಬೇಕಾಗಿರುವಂಥ ಒಂದು ಪ್ರಾರಂಭ ಶುರುವಾಗಿದೆ. ಅಭಿವೃದ್ಧಿಯಲ್ಲಿ ಒಂದು ಹೊಸ ಶಕೆ ಪ್ರಾರಂಭವಾಗಿದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ವಿಶೇಷವಾಗಿ ಕರ್ನಾಟಕ ಅಭಿವೃದ್ಧಿ ರಂಗದ ನಮ್ಮ ಸಂಕಲ್ಪ ಏನಿದೆ ಆ ಸಂಕಲ್ಪದಂತೆ ಕಳೆದ ಒಂದು ವರ್ಷದಿಂದ ನಮ್ಮ ಆಡಳಿತ ಅತ್ಯುತ್ತಮವಾಗಿ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಈ ರೀತಿಯ ಅತ್ಯುತ್ತಮವಾದ ಆಡಳಿತವನ್ನು ಕೊಟ್ಟಿರುವುದೇ ಈ ಸರ್ಕಾರದ ಸಾಧನೆಯಾಗಿದೆ. ಅಭಿವೃದ್ಧಿಗೆ ಬೇಕಾಗಿರುವಂಥ ಎಲ್ಲ ಪ್ರಯತ್ನಗಳು ಸರ್ಕಾರದ ಎಲ್ಲ ಇಲಾಖೆಗಳಲ್ಲಿ ನಡೆದಿದೆ. ಎಲ್ಲ ಮಂತ್ರಿಗಳು ಸರ್ಕಾರದಲ್ಲಿ ಅತ್ಯುತ್ತಮವಾದ ಜನಪರವಾದ ಕೆಲಸಗಳನ್ನು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಕರ್ನಾಟಕ ಅಭಿವೃದ್ಧಿ ರಂಗದಲ್ಲಿ ನಾವು ಏನು ಹೇಳಿದ್ದೆವೋ, ಅದೇ ರೀತಿ ಬಜೆಟ್‌ನಲ್ಲಿ ನಾವು ಏನು ಹೇಳಿದ್ದೆವೋ ಅವುಗಳನ್ನೆಲ್ಲಾ ಅನುಷ್ಠಾನ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿರುವುದನ್ನು

ನಾವು ಕಾಣುತ್ತಿದ್ದೇವೆ. ಹೀಗಾಗಿ ಇಂಥ ಒಂದು ಅತ್ಯುತ್ತಮವಾದ ಸಾಧನೆಯನ್ನು ಮಾಡುತ್ತಿರುವಂಥ ಸರ್ಕಾರದ ಪರವಾಗಿ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣವನ್ನು ಮಾಡಿ ಸದನಕ್ಕೆ, ಪ್ರಜಾಪ್ರಭುತ್ವ ನೀತಿಗೆ ಅವರು ಗೌರವವನ್ನು ತಂದುಕೊಟ್ಟಿದ್ದಾರೆ. ನಾನು ಈ ಮೂಲಕ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಸರ್ಕಾರದ ಸಾಧನೆಯವನ್ನು ಅವರು ಮೆಚ್ಚಿ ನಮ್ಮ ಬೆನ್ನನ್ನು ತಟ್ಟಿದ್ದಾರೆ. ಆದಕಾರಣ ನಾನು ರಾಜ್ಯಪಾಲರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ(ಬಳ್ಳಾರಿ): ಮಾನ್ಯ ಛೇರ್ಮನ್‌ರವರೆ. ನಮ್ಮ ಘನತೆವೆತ್ತ ರಾಜ್ಯಪಾಲರು 5ನೇ ತಾರೀಖಿನಂದು ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿ ನಮ್ಮ ಕರ್ನಾಟಕ ಪ್ರಗತಿಪರ ರಂಗದ ಮುಂದಿನ ಮಾರ್ಗಸೂಚಿಯನ್ನು ಸದಸದಲ್ಲಿ ದಯಪಾಲಿಸಿದ್ದಾರೆ. ಈ ನಮ್ಮ ಕಾಂಗ್ರೆಸ್‌ನವರಿಗೆ ಸುಮಾರು 120 ವರ್ಷಗಳ ಇತಿಹಾಸವಿದೆ, ಹೀಗಿದ್ದರೂ ಕೂಡ ಇವರಿಗೆ ಇನ್ನೂ ಸದನವನ್ನು ಹೇಗೆ ನಡೆಸಬೇಕು ಎಂಬುದೇ ಗೊತ್ತಿಲ್ಲ. ಇವರೆಲ್ಲಾ ಸದನದ ಬಾವಿಯಿಂದ ಹೊರಗೆ ಬಂದು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಕಾಂಗ್ರೆಸ್ ಪಾರ್ಟಿಯಲ್ಲಿ ನೀವೆಲ್ಲಾ ಈಗಾಗಲೇ ನೆಲ ಹತ್ತಿದ್ದೀರಿ. ಮತ್ತೆ ಏಕೆ ನೀವು ಈ ರೀತಿ ನಡೆದುಕೊಳ್ಳುತ್ತೀರಿ. ಮಾನ್ಯ ಛೇರ್ಮನ್‌ರವರೆ, ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ದಯಪಾಲಿಸಿರತಕ್ಕಂಥ ಭಾಷಣಕ್ಕೆ ಸನ್ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ತಂದಿರತಕ್ಕಂಥ ವಂದನಾ ನಿರ್ಣಯವನ್ನು ಅನುಮೋದಿಸುತ್ತಾ ನಾನು ಕೆಲವು ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ. 100 ದಿವಸಗಳ ಅಧಿವೇಶನವನ್ನು ನಡೆಸಬೇಕು ಎಂದು ಏನು ಕಾಯಿದೆಯನ್ನು ಮಾಡಲಾಗಿದೆ ಅದಕ್ಕೆ ಅಡಚಣೆಯನ್ನು ಮಾಡುವುದು ಕಾಂಗ್ರೆಸ್ಸಿಗರ ನೀತಿಯಾಗಿದೆ. ಸದನದಲ್ಲಿ ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸರ್ಕಾರವನ್ನು ಎಚ್ಚರಿಸಬೇಕು. ಅದನ್ನು ಹೊರತುಪಡಿಸಿ ಮಿಕ್ಕೆಲ್ಲಾ ರಾಜಕಾರಣವನ್ನು ಮಾಡುತ್ತಿರುವ ಕಾಂಗ್ರೆಸ್ಸಿಗರ ನೀತಿಯನ್ನು ನಾವು ಖಂಡಿಸಬೇಕಾಗುತ್ತದೆ. ಬೆಳಗಾಂನಲ್ಲಿ ಅಧಿವೇಶನವನ್ನು ನಡೆಸಿರುವುದು ನಮ್ಮ ಸರ್ಕಾರದ ಕೀರ್ತಿಯಾಗಿದೆ. ರೈತರಿಗೆ ಸಾಲ ಮನ್ನಾ ಮಾಡಿರತಕ್ಕಂಥದ್ದು, ಹೆಣ್ಣು ಮಕ್ಕಳಿಗೆ ಸೈಕಲ್‌ಗಳನ್ನು ವಿತರಣೆ ಮಾಡಿರತಕ್ಕಂಥದ್ದು, ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಹೆಣ್ಣು ಮಕ್ಕಳಿಗೆ 10 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥದ್ದು, ಹೀಗೆ ಇವೆಲ್ಲವೂ ಕೂಡ ಬಡವರ ಪರವಾಗಿರತಕ್ಕಂಥ ಯೋಜನೆಗಳೇ ಆಗಿದ್ದು ಇವುಗಳನ್ನು ನಮ್ಮ ಸರ್ಕಾರ

ಕಾರ್ಯಗತ ಮಾಡುತ್ತಿರತಕ್ಕಂಥದ್ದು. ಶವ ಸಂಸ್ಕಾರಕ್ಕೂ ಕೂಡ ಸರ್ಕಾರ ಬಡವರ ನೆರವಿಗೆ ಹೋಗುವ ಕೆಲಸವನ್ನು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸದನದಲ್ಲಿ ಘನತೆವೆತ್ತ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ತಂದಿರತಕ್ಕಂಥ ವಂದನಾ ನಿರ್ಣಯಕ್ಕೆ ನಾವು ಅನುಮೋದನೆಯನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಗೃಹ ಸಚಿವರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾಡಿದಂಥ ವಂದನಾ ನಿರ್ಣಯವನ್ನು ತಾವು ಸಭೆಯಲ್ಲಿ ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ನಿರ್ಣಯ:

ಛೇರ್ಮನ್: ಪ್ರಸ್ತಾವ ಏನೆಂದರೆ, ದಿನಾಂಕ 25.01.2007ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

7. ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರದೇಶಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ಅಶಾಂತಿ, ಆಸ್ತಿಪಾಸ್ತಿ ನಷ್ಟ ಹಾಗೂ ಪ್ರಾಣ ಹಾನಿ ಉಂಟಾಗಿರುವ ಬಗ್ಗೆ.

ಛೇರ್ಮನ್: ಈಗ ನಿಯಮ 69 ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಮೇಲೆ ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ವಿಷಯ ಪ್ರಸ್ತಾಪ ಮಾಡಿ ಮಾತನಾಡಬೇಕು.

(ಸದನದ ಬಾವಿಯಿಂದಲೇ ಕಾಂಗ್ರೆಸ್ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಛೇರ್ಮನ್‌ರವರೆ, ನಾವು ಸದನ ನಡೆಸಿ ಎಂದು ಹೇಳಿದ್ದು ಈ ರೀತಿಯಲ್ಲ. ಸದನವನ್ನು ಈ ರೀತಿ ನಡೆಸಿ ಎಂದು ನಾವು ಹೇಳಿಲ್ಲ. ನೀವು ಇಲ್ಲಿ ಏನು ನಡೆಸುತ್ತಿದ್ದೀರಿ? ಏನು ನೀವು ಸದನವನ್ನು ನಡೆಸುತ್ತಿದ್ದೀರೋ ಅಥವಾ ಜಾತ್ರೆಯನ್ನು ನಡೆಸುತ್ತಿದ್ದೀರೋ?

ಛೇರ್ಮನ್: ತಾವು ಈಗ ನಿಯಮಾವಳಿ ಪ್ರಕಾರ ಮಾತನಾಡುತ್ತೀರಾ?